**ಸಾಕ್ಷಿಗೆ ದಿನಾಂಕಃ 24.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ಶ್ರೀ. KSS ವಕೀಲರಿಂದಃಃ**

ನಾನು ಕೃಷಿಕ. ನನ್ನ ಊರು ತೆಕ್ಕೂರು. ಸದರಿ ಗ್ರಾಮ ಬಾಳೆಹೊನ್ನೂರಿನಿಂದ ಸುಮಾರು 40 ಕಿ ಮೀ ದೂರದಲ್ಲಿದೆ. ನಾನು ಘಟನಾ ದಿನದಂದು ಚಾಸಾ-1 ರವರಿಗೆ ರಾತ್ರಿ 9.00 ಗಂಟೆಗೆ ಫೋನ್ ಕರೆ ಮಾಡಿದೆ. ನಾನು ಆ ಸಂದರ್ಭದಲ್ಲಿ ಬಾಳೆಹೊನ್ನೂರಿಗೆ ಆಗತಾನೆ ನನ್ನ ಆಲ್ಟೋ ಕಾರಿನಲ್ಲಿ ಒಬ್ಬನೆ ಬಂದಿದ್ದೆ. ಆ ಸಂದರ್ಭದಲ್ಲಿ ಚಾಸಾ-1 ಮತ್ತು 4 ರವರು ಸೌಂದರ್ಯ ಹೋಟೆಲ್ ಒಳಗೆ ನನಗಾಗಿ ಊಟಕ್ಕೆ ಕಾಯುತ್ತಿದ್ದರು. ನಾನು ಬಂದ ನಂತರ ನಾವೆಲ್ಲರೂ ಒಟ್ಟಿಗೆ ಅಲ್ಲಿ ಸುಮಾರು ಅರ್ಧ ಗಂಟೆ ಊಟ ಮಾಡಿದೆವು. ಆ ಸಂದರ್ಭದಲ್ಲಿ ಆರೋಪಿತರು ಹೋಟೆಲ್ ಒಳಗಡೆ ಇದ್ದರು. ಆ ಸಂದರ್ಭದಲ್ಲಿ ಆರೋಪಿತರು ಒಂದಿಬ್ಬರ ಜೊತೆ ಅಲ್ಲಿಯೇ ಊಟ ಮಾಡುತ್ತಿದ್ದರು ಎಂದರೆ ಸರಿ. ಸದರಿ ಹೋಟೆಲ್ ನಲ್ಲಿ ಸಿಸಿಟಿವಿ ಅಳವಡಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಹೋಟೆಲ್ ನಲ್ಲಿ ಮದ್ಯ ಮಾರಾಟ ಇರುವುದಿಲ್ಲ. ಸದರಿ ಹೋಟೆಲ್ ನಿಂದ ಎಷ್ಟು ದೂರದಲ್ಲಿ ಬಾರ್ ಇದೆ ಎಂದು ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಹೋಟೆಲ್ ನಲ್ಲಿ ಸುಮಾರು 10 ಜನರು ಇದ್ದರು. ನನಗೆ ಆರೋಪಿತರ ಪರಿಚಯ ಇದೆ. ಗಲಾಟೆಯಾದಾಗ ಹೋಟೆಲ್ ನಲ್ಲಿದ್ದ ಎಲ್ಲರು ಅಲ್ಲಿ ಸೇರಿದರು. ಸದರಿ ಗಲಾಟೆ ಹೋಟೆಲ್ ನ ಒಳಗೆ ಆಗಿರುವುದಿಲ್ಲ. ಹೋಟೆಲ್ ನಲ್ಲಿ ಹೆಚ್ಚು ಜನ ಇದುದ್ದರಿಂದ ಅಲ್ಲಿ ಏನಾಯಿತು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಸದರಿ ಗಲಾಟೆಯಾದ ಸಂದರ್ಭದಲ್ಲಿ ನೀವು ನೇರವಾಗಿ ಊರಿಗೆ ಹೋದಿರಾ ಎಂದರೆ ಸಾಕ್ಷಿಯು ನಾವು ಆಸ್ಪತ್ರೆಗೆ ಹೋದೆವು ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಪೊಲೀಸರು ಅಲ್ಲಿಗೆ ಬಂದಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಆಸ್ಪತ್ರೆಗೆ ಹೋದ ಬಳಿಕ ಪೊಲೀಸರು ಅಲ್ಲಿಗೆ ಬಂದರು. ಆಗ ಪೊಲೀಸರು ನನ್ನ ಹೇಳಿಕೆ ದಾಖಲು ಮಾಡಿಕೊಳ್ಳಲಿಲ್ಲ. ತದನಂತರ ನಾವು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಹೋಗಲಿಲ್ಲ. ಆ ದಿನ ರಾತ್ರಿ ಸುಮಾರು 10.30 ಗಂಟೆಗೆ ನಾನು ಮಾತ್ರ ಶೃಂಗೇರಿ ತಲುಪಿದೆ. ನಾನು ಆ ದಿನ ಪೊಲೀಸ್ ಠಾಣೆಗೆ ಹೋಗಲಿಲ್ಲ. ಈ ಪ್ರಕರಣದಲ್ಲಿ ಘಟನೆಯಾದ 2 ನೇ ದಿನ ಪೊಲೀಸರು ನನಗೆ ನೋಟೀಸು ನೀಡಿರುತ್ತಾರೆ. ಸದರಿ ನೋಟಿಸಿನಲ್ಲಿ ಏನು ಬರೆದಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ನೋಟೀಸನ್ನು ನನಗೆ ಯಾರು ಜಾರಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ